**ದಿನಾಂಕ: 24.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ವಿ ಎಂ ವಕೀಲರಿಂದಃ**

2. ನಾನು ಪಿರ್ಯಾದಿ ಹಾಗೂ ಕಾನೂನು ಬದ್ದ ನೋಟಿಸು ತಯಾರಿಸಲು ನಮ್ಮ ಹಿಂದಿನ ವಕೀಲರಾದ ಶ್ರೀ. ಎಸ್ ಬಿ ಶೇಷಗಿರಿಯವರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಕಾರ್ ಬಾಡಿಗೆ ಇಲ್ಲದೇ ಇದ ಸಂದರ್ಭದಲ್ಲಿ ಬಾಡಿಗೆಗೆ ಹೋಗುತ್ತೇನೆ ಇಲ್ಲದೇ ಇದ್ದ ಸಂದರ್ಭದಲ್ಲಿ ಮನೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನನಗೆ ವಾರದಲ್ಲಿ ಮೂರು ದಿನ ಮಾತ್ರ ಬಾಡಿಗೆ ಇದ್ದು ಉಳಿದ ದಿನ ಬೇರೆ ಕೆಲಸ ಮಾಡುತ್ತೇನೆ ನಮ್ಮ ಕುಟುಂಬದ ಸದಸ್ಯರುಗಳ ಹೆಸರಿನಲ್ಲಿ ವ್ಯವಸಾಯದ ಜಮೀನುಗಳು ಇರುವುದಿಲ್ಲ. ನನ್ನ ಕಾರ್ ಚಾಲನೆಯಿಂದ ಬಂದ

ಸಂಪಾದನೆಯಿಂದ ನಮ್ಮ ಉಪಜೀವನ ನಡೆಯುತ್ತಿದ್ದೆ ಎಂದರೆ ಸರಿ. ನನ್ನ ಕಾರ್ ಚಾಲನೆಯಿಂದ ಎಲ್ಲಾ ಖರ್ಚುಗಳನ್ನು ಕಳೆದು ವರ್ಷಕ್ಕೆ ರೂ. 1 ಲಕ್ಷ ಉಳಿತಾಯ ಮಾಡುತ್ತೇನೆ. ನಾನು ಈ ಪ್ರಕರಣ ದಾಖಲಿಸುವದಕ್ಕಿಂತ 4-5 ವರ್ಷಗಳ ಮೊದಲಿನಿಂದ ಕಾರ್ ಚಾಲನೆ ಮಾಡುತ್ತೇನೆ ಎಂದರೆ ಸರಿ. ನಾನು ಆ ಕಾರ್ ನ್ನು ಖರೀದಿಸಿದ ದಿನದಿಂದ ಇಲ್ಲಿಯವರೆಗೆ ಸುಮಾರು 4 ರಿಂದ 5 ಲಕ್ಷ ಸಂಪಾದನೆ ಮಾಡಿರಬಹುದು. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ಅವರು ಉಡುಪಿಗೆ ಹೋಗಿ ತೋಟದ ಕೆಲಸ ಮಾಡುತ್ತಾರೆ. ಆ ಅಡಿಕೆ ತೋಟದಲ್ಲಿ ಕೆಲಸ ಮಾಡಲು ತಿಂಗಳಿಗೆ ರೂ. 10 ರಿಂದ 12 ಸಾವಿರ ಸಂಬಳ ಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ದಿನಕ್ಕೆ ರೂ. 900 ಕೂಲಿ ಕೊಡುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಉಡುಪಿಯಲ್ಲಿ ಒಬ್ಬರೇ ಇದ್ದಾರೆ. ನನ್ನ ತಂದೆಗೆ ತೋಟದ ಕೆಲಸದಿಂದ ದಿನಕ್ಕೆ ರೂ. 900 ಕೂಲಿ ಕೊಡುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಆದರ್ಶ ರವರು ಕಾಲೇಜು ವಿದ್ಯಾಬ್ಯಾಸ ಮಾಡುತ್ತಿದ್ದಾರೆ. ನನ್ನ ಸಹೋದರ ಹರೀಶ ರವರು ಅಲ್ಯೂಮಿನಿಯಂ ಫಾಬ್ರಿಕೇಷನ್ ಕೆಲಸ ಮಾಡುತ್ತಾರೆ. ಕಳೆದ 2 ವರ್ಷಗಳಿಂದ ಬಮ್ಮನಹಳ್ಳಿಯಲ್ಲಿ ಅಲ್ಯೂಮಿನಿಯಂ ಫಾಬ್ರಿಕೇಷನ ಕೆಲಸವನ್ನು ನನ್ನ ತಮ್ಮ ಹರೀಶ ಮಾಡುತ್ತಿದ್ದಾನೆ. ಕಳೆದ 2 ವರ್ಷಗಳಿಗಿಂತ ಮೊದಲು ನನ್ನ ಸಹೋದರ ಹರೀಶ ಯಾವುದೇ ಕೆಲಸ ಮಡುತ್ತಿರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಈ ಹಿಂದೆಯೂ ಸಹ ತುಮಕೂರು ಹಾಗೂ ಇತರೇ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

3. ನನ್ನ ಹೆಸರಿನಲ್ಲಿ ಹಾನಗಲ್ ತಾಲೂಕಿನ ಬಮ್ಮನಹಳ್ಳಿಯ ಯುನಿಯನ್ ಬ್ಯಾಂಕ್ ಮತ್ತು ಬ್ಯಾಡಗಿ ತಾಲೂಕಿನ ಶಿಡೇನೂರಿನ ಸಿಂಡಿಕೇಟ್ ಬ್ಯಾಕ್ ನಲ್ಲಿ ಖಾತೆಗಳು ಇವೆ. ನಾನು ಶಿಡೇನೂರಿನ ಶಾಲೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಖಾತೆ ತೆರೆದಿರುತ್ತೇನೆ ನಾನು ಆರೋಪಿಗೆ ನವೆಂಬರ 2022 ರಂದು ಹಣ ಕೊಟ್ಟಿರುತ್ತೇನೆ. ಅದರೆ ದಿನಾಂಕ ನನಗೆ ನೆನಪಿಲ್ಲ. ಆ ಹಣವನ್ನು ನಾನು ನಮ್ಮ ಮನೆಯಲ್ಲಿಯೇ ಕೊಟ್ಟೆನು. ನಾನು ಆರೋಾಪಿಗೆ ಹಣ ಕೊಟ್ಟ ದಿನವೇ ಚೆಕ್ ಬರೆದು ಕೊಟ್ಟನು. ಆ ದಿನ ಆರೋಪಿ ನ್ಯಾಯಾಲಯದ ಮುಂದೆ ಇರುವ ನಿಪಿ-1 ರಂತಹ ಚೆಕ್ ಬರೆದು ಕೊಟ್ಟರು. ಆ ದಿನ 4 ತಿಂಗಳುಗಳ ನಂತರ ಹಣ ವಾಪಸ್ಸು ಕೊಡುವುದಾಗಿ ಒಪ್ಪಿಕೊಂಡರು. ಆರೋಪಿ ತನಗೆ ಸಾಲದ ಸಮಸ್ಯೆ ಇದೆ ಎಂದು ಹೇಳಿ ನನ್ನಿಂದ ಸಾಲ ಪಡೆದರು. ನಾನು ಹಣವನ್ನು 2023 ರ ಎಪ್ರಿಲ್ ತಿಂಗಳಿನಲ್ಲಿ ವಾಪಸ್ಸು ಕೊಡುವಂತೆ ಕೇಳಿದೆನು. ಈ ಹಿಂದೆ ನೀಡಿದ ಚೆಕ್ ನ್ನು ಬ್ಯಾಂಕ್ ಗೆ ಹಾಜರು ಪಡಿಸಿ ಹಣ ತೆಗೆದುಕೊಳ್ಳುವಂತೆ ತಿಳಿಸಿದನು. ಆರೋಪಿ 2022 ರಂದು ಮತ್ತು ಎಪ್ರಿಲ್ 2023 ರಂದು ಎರಡು ಚೆಕ್ ಗಳನ್ನು ಈ ಸಾಲದ ಹಣಕ್ಕೆ ಸಂಬಂಧಪಟ್ಟಂತೆ

ನೀಡಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಎಪ್ರಿಲ್ 2023 ರಂದು ಆ ಸಾಲಕ್ಕೆ ಸಂಬಂಧಪಟ್ಟಂತೆ ಆರೋಪಿ ನೀಡಿದ ಚೆಕ್ ಆಗಿರುತ್ತದೆ. ಎಪ್ರಿಲ್ 2023 ರಂದು ನೀಡಿದ ಚೆಕ್ ನ್ನು ಮಾರನಬೀಡ ಗ್ರಾಮದಲ್ಲಿರುವ ಆರೋಪಿ ಮನೆಗೆ ಹೋಗಿ ಪಡೆದುಕೊಂಡು ಬಂದಿರುತ್ತೇನೆ ಆದರೆ ದಿನಾಂಕ ನೆನಪಿಲ್ಲ. ಆರೋಪಿ ಚೆಕ್ ನೀಡಿದ ಸಂದರ್ಭದಲ್ಲಿ ನಾನು ಮತ್ತು ನನ್ನ ಸ್ನೇಹಿತ ಇದ್ದೆವು. ಆ ಸಂದರ್ಭದಲ್ಲಿ ಆರೋಪಿ ಮತ್ತು ಆತನ ತಾಯಿಯವರು ಸಹ ಇದ್ದರು. ಆರೋಪಿ ಆ ಚೆಕ್ ನ ಮೇಲೆ ಯಾವ ದಿನಾಂಕವನ್ನು ನಮೂದಿಸಿಕೊಟ್ಟರು ಎಂಬುದು ಈಗ ನನಗೆ ನೆನಪಿಲ್ಲ. ಆದರೆ ಆ ಚೆಕ್ ನ ದಿನಾಂಕವನ್ನು ಗಮನಿಸಿರುವುದಿಲ್ಲ. ಆ ಚೆಕ್ ನ್ನು 2023 ರಂದು ನಗದೀಕರಣಕ್ಕಾಗಿ ಹಾಜರು ಪಡಿಸಿರುತ್ತೇನೆ ಆದರೆ ದಿನಾಂಕ ಈಗ ನನೆ ನೆನಪಿರುವುದಿಲ್ಲ. ಈ ಬಗ್ಗೆ ಹಿಂಬರಹವನ್ನು ಯಾವ ದಿನಾಂಕ ಮತ್ತು ಏನು ನಮೂದಿಸಿ ಕೊಟ್ಟಿದ್ದಾರೆಂಬುದು ನನಗೆ ನೆನಪಿಲ್ಲ. ಆ ನೋಟಿಸು ಯಾವ ದಿನಾಂಕದಂದು ಜಾರಿಯಾಗಿದೆ ಎಂದು ನನಗೆ ನೆನಪಿಲ್ಲ. ದಿನಾಂಕ 20.05.2023 ರಂದು ಆರೋಪಿಗೆ ಕಾನನೂನು ಬದ್ದ ನೋಟಿಸು ತಲುಪಿರುವುದಿಲ್ಲ ಎಂದರೆ ಸರಿಯಲ್ಲ.

4. ಆರೋಪಿ 2022 ರಂದು ನೀಡಿದ ಚೆಕ್ ನ್ನು ಸಹ ನಗದೀಕರಣಕ್ಕಾಗಿ ಬಮ್ಮನಹಳ್ಳಿಯ ಶಾಖೆಗೆ ಹಾಜರು ಪಡಿಸಿದೆನು. ಆರೋಪಿ ಆ ಸಂದರ್ಭದಲ್ಲಿ ಹಣವನ್ನು ವಾಪಸ್ಸು ಕೊಡುತ್ತೇನೆಂದು ಹೇಳಿದ ಕಾರಣ ಆ ಚೆಕ್ ಪ್ರಕರಣ ದಾಖಲಿರುವುದಿಲ್ಲ. ಆ ಚೆಕ್ ನಂಬರ ನನಗೆ ನೆನಪಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನಾನು ಆರೋಪಿಗೆ ಆ ಹಣವನ್ನು ಬ್ಯಾಂಕ್ ಮೂಲಕ ನೀಡಲು ತೊಂದರೆ ಇರಲಿಲ್ಲ. ನಾನು ಎಸ್ ಎನ್ ಎಸ್ ಏಜೆನ್ಸಿ ಯಲ್ಲಿ ಸಂಬಳ ಪಡೆಯುತ್ತಿದ್ದ ಬಗ್ಗೆ ಮತ್ತು ಧರ್ಮಸ್ಥಳ ಗ್ರಾಮಿ ಬ್ಯಾಂಕ್ ನಲ್ಲಿ ಸಾಲದ ಪಡೆದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿ ಮತ್ತು ಅವರ ತಂದೆ ನನಗೆ ಎಂದೂ ಸಹ ಪರಿಚಯಸ್ಥನಲ್ಲ ಎಂದರೆ ಸಾಕ್ಷಿಯು ಆರೋಪಿಯ ತಂದೆ ನನಗೆ ಪರಿಚಯಸ್ಥನಲ್ಲ ಆದರೆ ಆರೊಪಿ ಪರಿಚಯಸ್ಥ ಎಂದು ಸ್ವತಃ ನುಡಿಯುತ್ತಾರೆ. ಆರೋಪಿ ಧಾರವಾಡದಲ್ಲಿ ವಾಸವಾಗಿರುವುದರಿಂದ ಆತ ನನಗೆ ಪರಿಚಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಕುಟುಂಬದ ಅಡಚಣೆ ಇಲ್ಲದೇ ಇರುವುದರಿಂದ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಚೆಕ್ ನ ಮೇಲೆ ಆರೋಪಿ ಸಹಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರ ಮೇಲಿರುವ ಸಹಿ ಆರೋಪಿಯದ್ದಲ್ಲ ಆ ಸಹಿಯನ್ನು ನಾನೇ ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನನ್ನಿಂದ ಹಣ ಪಡೆಯದೇ ಇರುವದರಿಂದ ನನಗೆ ಹಣ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್